# ನಾಡಾ ವರದಿ: ಯಾವುದು ಸತ್ಯ?

**ಒಲಿಂಪಿಕ್ಸ್ ಹತ್ತಿರವಿದ್ದಾಗಲೂ ಉದ್ದೀಪನಾ ಮದ್ದು ಸೇವನೆ ಪ್ರಕರಣಗಳು ಪತ್ತೆಯಾಗಿರುವುದು ಕ್ರೀಡಾಪ್ರೇಮಿಗಳಲ್ಲಿ ಆಘಾತ ಮೂಡಿಸಿದೆ. ಜೊತೆಗೆ ನಾಡಾ ಮತ್ತು ವಾಡಾದ ಕಾರ್ಯ ವೈಖರಿ ಬಗ್ಗೆಯ ಹಲವು ಪ್ರಶ್ನೆಗಳು ಉದ್ಭವವಾಗಿವೆ.**

■ **ಪ್ರಮೋದ ಜಿ.ಕೆ.**




ಸೀಮಾ

ರಿಯೊ ಡಿ ಜನ್ಯೆರೊ ಒಲಿಂಪಿಕ್ಸ್‌ನಲ್ಲಿ ಭಾರತದಿಂದ ಎಷ್ಟು ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ ಎನ್ನುವುದು ಕೂಟ ಆರಂಭವಾದರೂ ಖಚಿತವಾಗದೆ ಗೊಂದಲ ಉಂಟಾಗಿರುವುದು ವಿಷಾದದ ಸಂಘತಿ.

ಒಲಿಂಪಿಕ್ಸ್ ಹತ್ತಿರ ಬಂದಂತೆಲ್ಲಾ ನಮ್ಮಲ್ಲಿ ನಿಷೇಧಿತ ಉದ್ದೀಪನಾ ಮದ್ದು ಸೇವನೆ ಪ್ರಕರಣಗಳು ಒಂದೊಂದಾಗಿ ಬಯಲಾದವು. ಕುಸ್ತಿ ಪಟು ನರಸಿಂಗ್ ಪಂಚಮ್ ಯಾದವ್, ಶಾಟ್‌ಪಟ್ ಅಥ್ಲೀಟ್ ಇಂದರಜೀತ್ ಸಿಂಗ್ ಮತ್ತು 200 ಮೀಟರ್ಸ್ ಓಟದಲ್ಲಿ ದೇಶವನ್ನು ಪ್ರತಿನಿಧಿಸಬೇಕಿರುವ ಧರ್ಮವೀರ್ ಸಿಂಗ್– ಹೀಗೆ ಒಬ್ಬೊಬ್ಬರಾಗೊ ಸಿಕ್ಕಿ ಬಿದ್ದರು.

ವಿಶ್ವ ಮಟ್ಟದಲ್ಲಿ ಕ್ರೀಡಾಕೂಟ ನಡೆದಾಗ ರಾಷ್ಟ್ರೀಯ ಉದ್ದೀಪನಾ ಮದ್ದು ತಡೆ ಘಟಕ (ನಾಡಾ) ಮತ್ತು ವಿಶ್ವ ಉದ್ದೀಪನಾ ಮದ್ದು ತಡೆಘಟಕ (ವಾಡಾ) ಕ್ರೀಡಾಪಟುಗಳನ್ನು ಕಟ್ಟುನಿಟ್ಟಾಗಿ ಪರೀಕ್ಷೆಗೆ ಒಳಪಡಿಸುತ್ತದೆ. ಕ್ರೀಡಾಪಟುಗಳು ಮದ್ದು ಸೇವಿಸಿದ್ದೇ ನಿಜವಾದಲ್ಲಿ ಅದನ್ನು ಸಾಬೀತು ಪಡೆಸುವಲ್ಲಿ ಈ ಸಂಸ್ಥೆಗಳು ಹಲವು ಬಾರಿ ವಿಫಲವಾಗಿವೆ. ವಾರಗಳ ಹಿಂದಿನ ಘಟನೆಯೊಂದು ಇದಕ್ಕೆ ನಿದರ್ಶನದಂತಿದೆ.

ಜೂನ್‌ನಲ್ಲಿ ಬೆಂಗಳೂರಿನಲ್ಲಿ ಇಂಡಿಯನ್ ಗ್ರ್ಯಾನ್ ಪ್ರಿ ಅಥ್ಲೆಟಿಕ್ಸ್ ನಡೆದಿತ್ತು. ಆಗ ನಾಡಾ ನಡೆಸಿದ ಪರೀಕ್ಷೆಯಲ್ಲಿ ಧರ್ಮವೀರ್ ಸಿಂಗ್ ಮದ್ದು ಸೇವಿಸಿದ್ದು ಒಂದು ತಿಂಗಳ ನಂತರ ಬಯಲಾಗಿದೆ. ಒಲಿಂಪಿಕ್ಸ್ ಆರಂಭವಾಗಲು ಮೂರು ದಿನಗಳಷ್ಟೇ ಬಾಕಿ ಇರುವಾಗ ಈ ವಿಷಯ ತಿಳಿದಿದೆ. ಇನ್ನೂ ಧರ್ಮವೀರ್ 'ಬಿ' ಮಾದರಿಯ ಪರೀಕ್ಷೆಗೆ ಒಳಪಟ್ಟು ಅದರ ವರದಿ ಬರುವ ತನಕ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವಂತಿಲ್ಲ. ಇಂದರಜೀತ್ ಕೂಡ ಇದೇ ರೀತಿಯ ಸಂಕಷ್ಟ ಎದುರಿಸುತ್ತಿದ್ದಾರೆ.

ನರಸಿಂಗ್ ಯಾದವ್ ಪ್ರಕರಣವಂತೂ ನಾಡಾದ ಕಾರ್ಯ ವೈಖರಿಯನ್ನೇ ಪ್ರಶ್ನಿಸುವಂತಿದೆ. 'ಎ' ಮಾದರಿಯ ಪರೀಕ್ಷೆ ವರದಿಯ ಪ್ರಕಾರ ಅವರು ಮದ್ದು ಸೇವಿಸಿದ್ದು ಸಾಬೀತಾಗಿತ್ತು. ಆದ್ದರಿಂದ ಅವರ ಒಲಿಂಪಿಕ್ಸ್ ಹಾದಿ ಮುಚ್ಚಿಹೋಗಿದೆ ಎಂದು ಎಲ್ಲಾ ಮಾಧ್ಯಮಗಳು ಷರಾ ಬರೆದುಬಿಟ್ಟಿದ್ದವು. ಆದರೆ, 'ಬಿ' ಮಾದರಿಯ ಪರೀಕ್ಷೆಯಲ್ಲಿ ಯಾದವ್ ಮದ್ದು ಸೇವನೆ ಮಾಡಿಲ್ಲ ಎಂದು ಅದೇ ನಾಡಾ ಸಂಸ್ಥೆ ವರದಿ ನೀಡಿದೆ. ಒಂದೇ ಸಂಸ್ಥೆ ಒಂದು ವಾರದ ಅವಧಿಯಲ್ಲಿ ಎರಡು ಭಿನ್ನ ರೀತಿಯ ವರದಿಗಳನ್ನು ನೀಡಿದ್ದು ಕ್ರೀಡಾ ವಲಯದಲ್ಲಿ ಚರ್ಚೆಗೆ ಗ್ರಾಸವೊದಗಿಸಿದೆ. ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ಅವರೇ ಮದ್ದು ತಡೆಘಟಕಗಳ ಕೆಲಸದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಅಥ್ಲೆಟಿಕ್ ಕೂಟದ ವೇಳೆ ಕ್ರೀಡಾಪಟುಗಳ ಮದ್ದು ಸೇವನೆ ಬಗ್ಗೆ ದೇಶದ ಹೆಸರಾಂತ ಅಥ್ಲೀಟ್‌ವೊಬ್ಬರು ಮಾಧ್ಯಮಗಳ ಜೊತೆ ಔಪಚಾರಿಕವಾಗಿ ಮಾತನಾಡಿದ್ದರು. 'ಮದ್ದು ಸೇವಿಸಿ



ನರಸಿಂಗ್ ಯಾದವ್

ಅಪಾಯ ಮೈಮೇಲೆ ಎಳೆದುಕೊಳ್ಳದಂತೆ ಕ್ರೀಡಾಪಟುಗಳಿಗೆ ತಿಳಿ ಹೇಳಬೇಕು ನಿಜ. ಆದರೆ ನಾಡಾ ಈ ವಿಷಯದಲ್ಲಿ ಕರಾರುವಾಕ್ಕಾಗಿ ಕೆಲಸ ಮಾಡಬೇಕು. ಮದ್ದು ಸೇವಿಸಿದರೂ ಕ್ರೀಡಾಪಟುಗಳನ್ನು ಮುದ್ದು ಮಾಡುವುದನ್ನು ಬಿಡಬೇಕು. ಇನ್ನೊಂದು ಬಾರಿ ಮದ್ದು ಸೇವಿಸದಂತೆ ಎಚ್ಚರಿಕೆಯನ್ನಷ್ಟೇ ನೀಡಿ ಆಟಗಾರರನ್ನು ಬಿಟ್ಟುಬಿಡುತ್ತಾರೆ. ಆದ್ದರಿಂದ ಮದ್ದು ಸೇವನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಆ ಕ್ರೀಡಾಪಟು ಮುಂದೆ ರಾಷ್ಟ್ರವನ್ನು ಪ್ರತಿನಿಧಿಸುವಾಗ ಪ್ರಭಾವ ಬೀರಿ ನಿಷೇಧದ ಭೀತಿಯಿಂದ ಪಾರಾಗುತ್ತಾನೆ. ಒಂದು ವೇಳೆ ನಾಡಾ